ಜೀವನದ ಆಶಯಗಳನ್ನು ಬೆರೆಸಿ ಆಶಾವಾದಿಗಳಾಗಬಹುದು. ಹೀಗೆ ಆಗಬೇಕೆಂದರೆ ಒಂದು ಸಿನಿಮಾವನ್ನು ಪ್ರಾತಿನಿಧಿಕವಾಗಿ ಉಪಯೋಗಿಸಬಹುದು. ಆದರೆ, ಒಬ್ಬ ನಟನನ್ನು ಹಾಗೂ ಅವನ ಜೀವನ, ಪಾತ್ರಗಳು, ಸಂದರ್ಶನಗಳನ್ನು ಒಂದು ಸಂಕೇತವಾಗಿ ಉಪಯೋಗಿಸುವುದೆಂದರೆ?

ಶ್ರಯಾನಾ ಬಾಲ್ಯದಿಂದಲೂ ಶಾರುಖ್ ಖಾನ್‌ನ ಸಿನಿಮಾ ನೋಡಿ ಬೆಳೆದವರು. ಮಿಕ್ಕ ನಾಯಕರಿಗಿಂತ ಶಾರುಖ್ ಖಾನನೇ ಒಂದು ಪ್ರತೀಕವಾಗಿ ನಿಲ್ಲಲು ಆಕೆ ಅನೇಕ ಕಾರಣಗಳನ್ನು ಬೆಳೆಸುತ್ತಾ ಹೋಗುತ್ತಾರೆ. ಅದು ಬೆಳೆಯುತ್ತಿದ್ದಂತೆ ಶಾರುಖ್ ಒಂದು ಪ್ರತೀಕವೆಂದೂ, ವ್ಯಕ್ತಿಗಿಂತ ಹಿರಿದಾದ ಒಂದು ಆಶಯವೆನ್ನುವುದು ನಮಗೆ ಅರಿವಾಗುತ್ತದೆ. ಅಮೂರ್ತವಾಗಿರುವ ನಮ್ಮ ಕನಸುಗಳಿಗೆ ಓರ್ವ ಸಿನಿಮಾ ತಾರೆಯ ಮೂರ್ತತೆಯನ್ನು ಕೊಟ್ಟು, ಅಲ್ಲಿನ ಘಟನೆಗಳಿಂದ ಬರುವ ಅನೇಕ ತುಣುಕುಗಳನ್ನು ಬೆಸೆದು ಹೊಸತೇ ಒಂದು ಕಥೆಯನ್ನು ಕಟ್ಟುವ ಪರಿ ಅಭೂತಪೂರ್ವವಾದದ್ದು. ಈ ಪ್ರತೀಕವು ಅಪರಿಚಿತರನ್ನು ಮಾತನಾಡಿಸುವ ದಾರಿಯನ್ನು ಸುಗಮವಾಗಿಸುತ್ತದೆ. ಮನೆಯಲ್ಲಿ ಮಹಿಳೆಯರ ಸ್ಥಾನ, ಅವರ ದಿನನಿತ್ಯದ ಕೆಲಸಗಳ ನಡುವಿನ ಏಕತಾನತೆ, ಬಿಡುಗಡೆಯ ಆದರೆ ಸಹಬಾಳ್ವೆಯ ಹಂಬಲ, ಮನೆಯಾಚೆಗೆ ಹೋಗಿ ಕೆಲಸಮಾಡಿ ಸ್ವತಂತ್ರವಾಗಿ ಜೀವಿಸಬೇಕೆನ್ನುವ ಹಂಬಲ, ಮತ್ತು ಈ ಎಲ್ಲವನ್ನೂ ಮೀರಿ ಶಾರುಖ್ ಖಾನನ ಅಭಿಮಾನಿಗಳೆನ್ನುವ ಒಂದು ಸಮೂಹವಿದೆ. ಎಲ್ಲವನ್ನೂ ಒಂದೇ ಬಾರಿಗೆ ಕಟ್ಟಿಕೊಟ್ಟು ಅಕಡೆಮಿಕ್ ಅನ್ನಿಸುವಂತಹ, ಸಾಮಾನ್ಯರಿಗೆ ಎಟುಕದಿರುವಂತಹ ವಿಚಾರಗಳನ್ನು ಶ್ರಯಾನಾರ ಕೃತಿ ಸರಳವಾಗಿ ನಿರೂಪಿಸುತ್ತಲೇ ಗಹನವಾಗಿ ನಮ್ಮನ್ನು ತಟ್ಟುತ್ತದೆ.



ಆದರೆ, ಅದು ಅಲ್ಲಿಗೆ ನಿಲ್ಲುವುದಿಲ್ಲ. ಶ್ರಯಾನಾ, ತಮ್ಮಂತೆಯೇ ಶಾರುಖ್‌ನ ಅಭಿಮಾನಿಗಳಾಗಿರುವ ಹೆಣ್ಣುಮಕ್ಕಳನ್ನು ಹುಡುಕಿ ಹೊರಡುತ್ತಾರೆ. ಸಿನಿಮಾ ಮಂದಿರಗಳಲ್ಲಿ, ಮಾತುಕತೆಯಲ್ಲಿ, ಪ್ರಯಾಣದಲ್ಲಿ ಭೇಟಿಯಾದ ಹೆಣ್ಣುಮಕ್ಕಳ ಜೊತೆ ಸಂಪರ್ಕದಲ್ಲಿದ್ದು ಅವರ ಆಶೋತ್ತರಗಳ ಬಗ್ಗೆ ಪ್ರಶ್ನಿಸುತ್ತಾರೆ. ಹಾಗೆ ಪ್ರಶ್ನಿಸುತ್ತಾ ಮಾತನಾಡಿಸುತ್ತಾ ಯುವ ಮಹಿಳೆಯರು ಸಿಲುಕಿರುವ ಸಾಂಸಾರಿಕ ಬಂಧನಗಳು, ಅವರಿಗಿರುವ ಅಡಚಣೆಗಳು, ಕೆಲಸ ಹುಡುಕುವ ದುಗುಡ, ಮದುವೆ ಇತ್ಯಾದಿಗಳ ಬಗ್ಗೆ ಅವರ ಪುಸ್ತಕ ತೆರೆದುಕೊಳ್ಳುತ್ತಾ ಹೋಗುತ್ತದೆ. ಶಾರುಖ್ ಎಂಬ ನಟನ ಅಭಿಮಾನಿಯಾಗಿರುವುದು ನೆಪಮಾತ್ರವಾಗುತ್ತಾ ಮಹಿಳೆಯರ ಕಥೆಗಳು ತೆರೆದುಕೊಳ್ಳುತ್ತಾ ಹೋಗುತ್ತವೆ. ಕಥೆಗಳು ತೆರೆದುಕೊಳ್ಳುತ್ತಿರುವಂತೆಯೇ ಅವನ ಸಿನಿಮಾದ ಘಟನೆಗಳು, ಅವನು ನೀಡಿದ ಸಂದರ್ಶನಗಳ ತುಣುಕುಗಳು ಆ ಕಥೆಗಳಿಗೆ